# ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮ

## ಮಾರ್ಗಸೂಚಿ

**I. ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೋಟಗಾರಿಕೆಯಲ್ಲಿ ಯಾಂತ್ರೀಕರಣವನ್ನು ಉತ್ತೇಜಿಸಲು 20 ಅಶ್ವಶಕ್ತಿಗಿಂತ ಹೆಚ್ಚು ಸಾಮರ್ಥ್ಯದ ಟ್ರ್ಯಾಕ್ಟರ್ ಹಾಗೂ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ಖರೀದಿಗಾಗಿ ಪ್ರತಿ ಘಟಕಕ್ಕೆ ಶೇ. 25% ರಂತೆ ಗರಿಷ್ಠ ರೂ. 75,000 (ರೂ. ಎಪ್ಪತ್ತೈದು ಸಾವಿರ) ದವರೆಗೆ ಸಹಾಯಧನ ನೀಡಲು ಅವಕಾಶವಿರುತ್ತದೆ.

20ಅಶ್ವಶಕ್ತಿವರೆಗಿನ ಸಾಮರ್ಥ್ಯದ ಟ್ರ್ಯಾಕ್ಟರ್ / ಪವರ್ ಟಿಲ್ಲರ್ ಹಾಗೂ ಟ್ರ್ಯಾಕ್ಟರ್/ಪವರ್ ಟಿಲ್ಲರ್ ಚಾಲಿತ ಕೃಷಿ ಉಪಕರಣಗಳ ಖರೀದಿಗಾಗಿ ಪ್ರತಿ ಘಟಕಕ್ಕೆ ಶೇ. 25% ರಂತೆ ಗರಿಷ್ಠ ರೂ. 30,000 (ರೂ. ಮೂವತ್ತು ಸಾವಿರ) ದವರೆಗೆ ಸಹಾಯಧನ ನೀಡಲು ಅವಕಾಶವಿರುತ್ತದೆ.

**II. ಕಾರ್ಯಕ್ರಮದ ಉದ್ದೇಶಗಳು:**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೋಟಗಾರಿಕೆಯಲ್ಲಿ ಯಾಂತ್ರೀಕರಣವನ್ನು ಉತ್ತೇಜಿಸಲು.

**III. ಕಾರ್ಯಕ್ರಮದ ಮುಖ್ಯ ಘಟಕ ಕಾರ್ಯಕ್ರಮಗಳು:**

1. ತೋಟಗಾರಿಕೆ ಬೆಳೆಗಳ ಕೃಷಿಗೆ ಅನುಕೂಲವಾಗುವಂತಹ ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ಖರೀದಿಸಲು ಸಹಾಯಧನ ನೀಡುವುದು.
2. ಭೂಮಿ ಸಿದ್ದತೆ, ಅಂತರ ಬೇಸಾಯ, ಸಸ್ಯ ಸಂರಕ್ಷಣೆ, ಗೊಬ್ಬರ, ತೋಟಗಾರಿಕೆ ಉತ್ಪನ್ನಗಳ ಸಾಗಣೆ, ಇತರೇ ಅವಶ್ಯಕ ಸಾಮಗ್ರಿಗಳನ್ನು ಸಾಗಿಸಲು ಹಾಗೂ ಬೆಳೆದ ಉತ್ಪನ್ನವನ್ನು ಸಾಗಾಣಿಕೆ ಮಾಡಿ, ಮಾರಾಟ ಮಾಡಲು ಅಗತ್ಯವಾದ ಟ್ರ್ಯಾಕ್ಟರ್‌ನೊಂದಿಗೆ ಇತರ ಅವಶ್ಯಕ ಉಪಕರಣಗಳನ್ನು ಖರೀದಿಸಲು ಸಹಾಯಧನ ನೀಡುವುದು.

**IV.ವಾರ್ಷಿಕ ಕ್ರಿಯಾ ಯೋಜನೆ :**

1. 2013-14 ನೇ ಸಾಲಿಗೆ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 20HP ಗಿಂತ ಹೆಚ್ಚು ಸಾಮರ್ಥ್ಯದ ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳಿಗೆ ರಾಜ್ಯಕ್ಕೆ ಭೌತಿಕ 1004 ಸಂಖ್ಯೆ ಹಾಗೂ ಆರ್ಥಿಕ ರೂ. 753.00 ಲಕ್ಷಗಳು ಅನುಮೋದನೆಯಾಗಿರುತ್ತದೆ.
2. 2013-14 ನೇ ಸಾಲಿಗೆ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 20ಅಶ್ವಶಕ್ತಿವರೆಗಿನ ಸಾಮರ್ಥ್ಯದ ಟ್ರ್ಯಾಕ್ಟರ್ / ಪವರ್ ಟಿಲ್ಲರ್ ಹಾಗೂ ಟ್ರ್ಯಾಕ್ಟರ್/ಪವರ್ ಟಿಲ್ಲರ್ ಚಾಲಿತ ಕೃಷಿಉಪಕರಣಗಳು ರಾಜ್ಯಕ್ಕೆ ಬೌತಿಕ 178 ಸಂಖ್ಯೆ ಹಾಗೂ ಆರ್ಥಿಕ ರೂ. 53.40 ಲಕ್ಷಗಳು ಅನುಮೋದನೆಯಾಗಿರುತ್ತದೆ.

## V. ತಾಂತ್ರಿಕ ವೈಶಿಷ್ಟತೆ:

1. ರೈತರು ಖರೀದಿಸಲು ಇಚ್ಛಿಸುವ ಟ್ರ್ಯಾಕ್ಟರ್ ಉತ್ತಮ ಗುಣಮಟ್ಟದ್ದಾಗಿರಬೇಕು.
2. ಖರೀದಿಸಿದ ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಯೋಗ್ಯವಾಗಿರಬೇಕು.

## VI. ಫಲಾನುಭವಿಗಳ ಅರ್ಹತೆ:

1. ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಫಲಾನುಭವಿಯು ತನ್ನ ಕುಟುಂಬದ (ತಂದೆ, ತಾಯಿ, ಹೆಂಡತಿ ಹಾಗೂ ಮಕ್ಕಳ) ಹೆಸರಿನಲ್ಲಿರುವ ಫಹಣಿ ನೀಡಿದ್ದಲ್ಲಿ ಅಥವಾ ಸದಸ್ಯರ ಜಂಟಿ ಖಾತೆಯಾಗಿದ್ದಲ್ಲಿ ಸಂಬಂಧಿಸಿದ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು ಮತ್ತು ಒಪ್ಪಿಗೆ ಪತ್ರಕ್ಕೆ ಕಡ್ಡಾಯವಾಗಿ ನೋಟರಿ (Notary) ಆಗಬೇಕು ಹಾಗೂ ಗ್ರಾಮಲೆಕ್ಕಾಧಿಕಾರಿಗಳಿಂದ ದೃಢೀಕೃತ ವಂಶವೃಕ್ಷ ಲಗತ್ತಿಸಬೇಕು.
   ಇತರೆ ರೈತರ ಹೆಸರಿನಲ್ಲಿರುವ ಜಮೀನಿಗೆ ಸಂಬಂಧಿಸಿದಂತಹ ಫಹಣಿಯನ್ನು ಪರಿಗಣಿಸುವಂತಿಲ್ಲ.
2. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ತನ್ನ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
3. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
4. ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.
5. ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ,ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು /ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.
6. ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮದಲ್ಲಿ ಸಹಾಯಧನ ಪಡೆಯುವ ಫಲಾನುಭವಿಗಳು ಕಡ್ಡಾಯವಾಗಿ ಹೊಂದಿರಬೇಕಾದ ಜಮೀನಿನ ಕನಿಷ್ಠ ಮಿತಿಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

| 20HP ಗಿಂತ ಹೆಚ್ಚಿನ ಸಾಮರ್ಥ್ಯದ ಟ್ರ್ಯಾಕ್ಟರ್ | 20HP ವರೆಗಿನ ಸಾಮರ್ಥ್ಯದ ಟ್ರ್ಯಾಕ್ಟರ್/ಪವರ್ ಟಿಲ್ಲರ್ |
|---|---|
| 1. ಫಲಾನುಭವಿಗಳು ಕಡ್ಡಾಯವಾಗಿ 2.00 ಹೆಕ್ಟೇರ್ (5 ಎಕರೆ) ಜಮೀನು ಹೊಂದಿರಬೇಕು. | 1. ಫಲಾನುಭವಿಗಳು ಕಡ್ಡಾಯವಾಗಿ 1.00 ಹೆಕ್ಟೇರ್ (2.5 ಎಕರೆ) ಜಮೀನು ಹೊಂದಿರಬೇಕು. |
| 2. ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಟ 1.00 ಹೆಕ್ಟೇರ್ (2.50 ಎಕರೆ) ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು. | 2. ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಟ 0.50 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು. |

ಮಲೆನಾಡು / ಕರಾವಳಿ ಪ್ರದೇಶಗಳಾದ ಕೊಡಗು (ಎಲ್ಲಾ ತಾಲ್ಲೂಕುಗಳು), ಉತ್ತರ ಕನ್ನಡ (ಎಲ್ಲಾ ತಾಲ್ಲೂಕುಗಳು), ದಕ್ಷಿಣ ಕನ್ನಡ (ಎಲ್ಲಾ ತಾಲ್ಲೂಕುಗಳು), ಉಡುಪಿ (ಎಲ್ಲಾ ತಾಲ್ಲೂಕುಗಳು), ಶಿವಮೊಗ್ಗ (ತೀರ್ಥಹಳ್ಳಿ, ಸಾಗರ,ಸೊರಬ, ಹೊಸನಗರ ತಾಲ್ಲೂಕುಗಳು), ಚಿಕ್ಕಮಗಳೂರು (ಚಿಕ್ಕಮಗಳೂರು, ಮೂಡಿಗೆರೆ, N.R. ಪುರ, ಶೃಂಗೇರಿ, ಕೊಪ್ಪ ತಾಲ್ಲೂಕುಗಳು), ಹಾಸನ (ಸಕಲೇಶಪುರ, ಆಲೂರು ತಾಲ್ಲೂಕುಗಳು) ಪ್ರದೇಶದ ಫಲಾನುಭವಿಯು ಕಡ್ಡಾಯವಾಗಿ ಹೊಂದಿರಬೇಕಾದ ಜಮೀನಿನ ಕನಿಷ್ಠ ಮಿತಿಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

| 20HP ಗಿಂತ ಹೆಚ್ಚಿನ ಸಾಮರ್ಥ್ಯದ ಟ್ರ್ಯಾಕ್ಟರ್ | 20HP ವರೆಗಿನ ಸಾಮರ್ಥ್ಯದ ಟ್ರ್ಯಾಕ್ಟರ್/ಪವರ್ ಟಿಲ್ಲರ್ |
|---|---|
| 1. ಫಲಾನುಭವಿಗಳು ಕಡ್ಡಾಯವಾಗಿ 1.00 ಹೆಕ್ಟೇರ್ ಜಮೀನು ಹೊಂದಿರಬೇಕು. | 1. ಫಲಾನುಭವಿಗಳು ಕಡ್ಡಾಯವಾಗಿ 0.40 ಹೆಕ್ಟೇರ್ ಜಮೀನು ಹೊಂದಿರಬೇಕು. |
| 2. ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಟ 0.50 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು. | 2. ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಟ 0.20 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು. |

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳು ಕಡ್ಡಾಯವಾಗಿ ಹೊಂದಿರಬೇಕಾದ ಜಮೀನಿನ ಕನಿಷ್ಠ ಮಿತಿಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ರಲ್ಲಿ ನೀಡಲಾಗಿದೆ.

| 20HP ಗಿಂತ ಹೆಚ್ಚಿನ ಸಾಮರ್ಥ್ಯದ ಟ್ರ್ಯಾಕ್ಟರ್ | 20HP ವರೆಗಿನ ಸಾಮರ್ಥ್ಯದ ಟ್ರ್ಯಾಕ್ಟರ್/ಪವರ್ ಟಿಲ್ಲರ್ |
|---|---|
| 1. ಫಲಾನುಭವಿಗಳು ಕಡ್ಡಾಯವಾಗಿ 1.00 ಹೆಕ್ಟೇರ್ ಜಮೀನು ಹೊಂದಿರಬೇಕು. | 1. ಫಲಾನುಭವಿಗಳು ಕಡ್ಡಾಯವಾಗಿ 0.40 ಹೆಕ್ಟೇರ್ ಜಮೀನು ಹೊಂದಿರಬೇಕು. |
| 2. ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಟ 0.50 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು. | 2. ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಟ 0.20 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು. |

7. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅಡಿಯಲ್ಲಿ ನರ್ಸರಿ ಸ್ಥಾಪಿಸಲು ಸಹಾಯಧನ ಪಡೆದವರಿಗೆ ಈ ಕಾರ್ಯಕ್ರಮದಡಿ, ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳು ಖರೀದಿಸಲು ಸಹಾಯಧನ ನೀಡುವಂತಿಲ್ಲ.
8. ಈಗಾಗಲೇ ಸರ್ಕಾರದ ವಿವಿಧ ಯೋಜನೆಯಡಿ ಟ್ರ್ಯಾಕ್ಟರ್ ಸಹಾಯಧನ ಪಡೆದಿರುವ ಕುಟುಂಬಕ್ಕೆ ಸಹಾಯಧನವನ್ನು ನೀಡುವಂತಿಲ್ಲ.

9. ಈ ಕಾರ್ಯಕ್ರಮದಡಿ ಖರೀದಿಸಿರುವ ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳಿಗೆ ಕೇಂದ್ರ/ ರಾಜ್ಯ ಸರ್ಕಾರದ ಇತರೇ ಯೋಜನೆಗಳಡಿ ಯಾವುದೇ ಇಲಾಖೆಯಿಂದ ಈ ಹಿಂದೆ ಸಹಾಯಧನ ಪಡೆದಿರುವುದಿಲ್ಲವೆಂದು ಧೃಡೀಕರಣ ಪಡೆದುಕೊಳ್ಳುವುದು ಹಾಗೂ ಸಹಾಯಧನ ಪಡೆದಿಲ್ಲದಿರುವದಕ್ಕೆ NOC ಅನ್ನು ಲಗತ್ತಿಸಿವುದು.

10. ಆದಾಯ ತೆರಿಗೆಯನ್ನು ಪಾವತಿಸುವ ರೈತರು ಈ ಸಹಾಯಧನಕ್ಕೆ ಅರ್ಹರಾಗಿರುವುದಿಲ್ಲ.

11. ಸಹಾಯಧನ ಪಡೆದಿರುವ ಟ್ರ್ಯಾಕ್ಟರ್/ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ಅನ್ನು ಕನಿಷ್ಠ 5 ವರ್ಷಗಳ ಕಾಲ ಬೇರೆಯವರಿಗೆ ಪರಭಾರೆ ಮಾಡಬಾರದು ಉದ್ದೇಶದಂತೆ ಉಪಕರಣದ ಸದುಪಯೋಗ ಮಾಡಿಕೊಳ್ಳುವುದು, ಗ್ರಾಮದಲ್ಲಿನ ಇತರೆ ರೈತರಿಗೂ ಇದರ ಸೌಲಭ್ಯ ನೀಡಬೇಕು.

12. ಮಾರ್ಗಸೂಚಿಯಲ್ಲಿ ನಿಗಧಿಪಡಿಸಿದ ಜಮೀನಿಗಿಂತ ಕಡಿಮೆ ಜಮೀನು ಫಲಾನುಭವಿಯ ಹೆಸರಿನಲ್ಲಿ ಇದ್ದಲ್ಲಿ ಅಂತಹ ಅರ್ಜಿಗಳನ್ನು KSHMA ಕಛೇರಿಗೆ ಶಿಫಾರಸ್ಸು ಮಾಡದೇ ಜಿಲ್ಲಾ ಮಟ್ಟದಲ್ಲಿ ಹಿಂತಿರುಗಿಸತಕ್ಕದ್ದು.

**VII. ಅರ್ಜಿಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-**

1. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಯಾಂತ್ರೀಕರಣ ಕಾರ್ಯಕ್ರಮದ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳಿಯ ಪತ್ರಿಕೆಗಳ ಮುಖಾಂತರವಾಗಿ ವಿವಿಧ ಮಾಧ್ಯಮಗಳು ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

2. ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.

3. ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.
    - ನಿಗದಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ
    - ಜನವರಿ-2013 ನಂತರದ ಪಹಣಿ (RTC) (ಅಳವಡಿಸಿದ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).

4. ಜಿಲ್ಲೆಯ ತೋಉನಿ (ಜಿಪಂ) ರವರು ಮೇಲ್ಕಂಡ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆಯ ಮಿತಿಯಲ್ಲಿ ಫಲಾನುಭವಿಗೆ Letter of Intent ನ್ನು 5 ದಿನಗಳೊಳಗಾಗಿ ನೀಡುವುದು.

5. ಇಲಾಖೆ ರವರಿಂದ Letter of Intent ನ್ನು ಪಡೆದ ನಂತರ ರೈತರು ಸದರಿ ಯೋಜನೆ ಅನುಸಾರ 45 ರಿಂದ 60 ದಿನಗಳ ಒಳಗಾಗಿ ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಖರೀದಿಸಿ ಈ ಕೆಳಕಂಡ ದಾಖಲಾತಿಗಳನ್ನು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.

   - ಜನವರಿ - 2013 ನಂತರದ ಪಹಣಿ (RTC) (ಅಳವಡಿಸಿದ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).
   - ತಾಲ್ಲೂಕು ಅಧಿಕಾರಿ ಹಾಗೂ ಫಲಾನುಭವಿಯೊಂದಿಗೆ ಟ್ರ್ಯಾಕ್ಟರ್‌ನ ಛಾಯಾಚಿತ್ರ ಹಾಗೂ ಟ್ರ್ಯಾಕ್ಟರ್ / ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ನೋಂದಣಿ ಸಂಖ್ಯೆಯು ಪ್ರಮುಖವಾಗಿ ಕಾಣುವ ಛಾಯಾಚಿತ್ರ (Photo).
   - ಟ್ರ್ಯಾಕ್ಟರ್‌ನ Invoice bill, ನೋಂದಣಿ ದೃಢೀಕರಣ (RC) ಮತ್ತು B-Extract ಲಗತ್ತಿಸಿರಬೇಕು.
   - ಫಲಾನುಭವಿಯು ಖರೀದಿಸಿರುವ ಟ್ರ್ಯಾಕ್ಟರ್‌ಗೆ ಸಹಾಯಧನ ನೀಡಿರುವುದಿಲ್ಲ ಎಂಬುದಕ್ಕೆ ಕೃಷಿ/ಇತರೇ ಇಲಾಖೆಯಿಂದ NOC ಲಗತ್ತಿಸಬೇಕು.
   - ಮುಚ್ಚಳಿಕೆ ಪತ್ರ.

6. ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಹೊಸದಾಗಿ 2013-14 ನೇ ಸಾಲಿನಲ್ಲಿ ಇಲಾಖೆಯಿಂದ ಅನುಮತಿ ಪತ್ರ ಪಡೆದ ನಂತರ ಖರೀಧಿಸಿರಬೇಕು ಹಾಗೂ ಟ್ರ್ಯಾಕ್ಟರ್‌ನ ನೋಂದಣಿಯು 2013-14 ನೇ ಸಾಲಿನಲ್ಲಿ ಅಂದರೆ ಏಪ್ರಿಲ್ - 2013 ನಂತರ ಆಗಿರಬೇಕು.

7. ಪರಿಶೀಲನಾ ದೃಢೀಕರಣ ನಮೂನೆಯಲ್ಲಿ ಕಡ್ಡಾಯವಾಗಿ ಟ್ರ್ಯಾಕ್ಟರ್ ನೋಂದಣಿ ಸಂಖ್ಯೆ, ನೋಂದಣಿ ದಿನಾಂಕ, ತೋಟಗಾರಿಕೆ ಬೆಳಗಳ ವಿವರ ಹಾಗೂ ವಿಸ್ತೀಣವನ್ನು ನಮೂದಿಸಿರಬೇಕು.

8. ತಾಲ್ಲೂಕು ಹಿಸತೋನಿ/ಸತೋನಿ ರವರು ಅರ್ಜಿ ಹಾಗೂ ಮೇಲ್ಕಂಡ ಟ್ರ್ಯಾಕ್ಟರ್‌ಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ 5 ದಿನಗಳ ಒಳಗಾಗಿ ಸಹಾಯಧನ ಅರ್ಜಿಯನ್ನು ತೋಉನಿ(ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು.ತೋಟಗಾರಿಕೆ ಉಪ- ನಿರ್ದೇಶಕರು (ಜಿಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ/ಸತೋನಿ ರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.

9. ರೈತರು ಸಲ್ಲಿಸುವ ಸಹಾಯಧನ ಅರ್ಜಿ ಮತ್ತು ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗೆ ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ ರವರು ಕಡ್ಡಾಯವಾಗಿ ಶೇ. 100% ರಷ್ಟು ಖರೀದಿಸಿದ ಟ್ರ್ಯಾಕ್ಟರ್ ಪರಿಶೀಲನೆ ನಡೆಸಬೇಕು. ಸತೋಅ ರವರು ಪರಿಶೀಲಿಸಿದ

ಟ್ರ್ಯಾಕ್ಟರ್‌ಗಳ ಪೈಕಿ ಕನಿಷ್ಟ ಶೇ. 50 ರಷ್ಟು ಟ್ರ್ಯಾಕ್ಟರ್‌ಗಳನ್ನು ತಾಲ್ಲೂಕು ಸತೋನಿ / ಹಿಸತೋನಿ ರವರು ಪರಿಶೀಲಿಸಬೇಕು. ಸತೋಅ ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರೂ ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ, ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು. ಜಿಲ್ಲೆಯ ತೋಉನಿ ರವರು ಶೇ. 5 ರಷ್ಟು ಟ್ರ್ಯಾಕ್ಟರ್‌ಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಸತೋನಿ / ಹಿಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರೂ ನ್ಯೂನ್ಯತೆಗಳಿದ್ದರೆ ಸತೋನಿ/ಹಿಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ Photo ನ್ನು ತೆಗೆದು ಇಲಾಖೆಯ ವೆಬ್‌ಸೈಟ್ ನಲ್ಲಿ Upload ಮಾಡುವುದು.

10. ರೈತರು ಬೆಳೆಯನ್ನು ಪಹಣಿಯಲ್ಲಿ ನಮೂದಿಸದೇ ಇರುವ ಪಕ್ಷದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ಯಿಂದ ಬೆಳೆಯನ್ನು ದೃಢೀಕರಿಸಿದ ಅರ್ಜಿಗಳನ್ನು ಸಹಾಯಧನಕ್ಕೆ ಪರಿಗಣಿಸುವುದು.
11. ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಖರೀದಿಸಲು ತೋಟಗಾರಿಕೆ ಉಪನಿರ್ದೇಶಕರ ಕಛೇರಿಯಿಂದ ಫಲಾನುಭವಿಗೆ ನೀಡಿರುವ ಅನುಮತಿ ಪತ್ರವನ್ನು ಲಗತ್ತಿಸಿರ ಬೇಕು.
12. ಫಲಾನುಭವಿ ಹಾಗೂ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ/ ತಾಲ್ಲೂಕು ಅಧಿಕಾರಿಯೊಂದಿಗಿನ ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ಛಾಯಾ ಚಿತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು ಹಾಗೂ ಛಾಯಾ ಚಿತ್ರ (Photo) ದಲ್ಲಿ ಟ್ರ್ಯಾಕ್ಟರ್ ನ ನೊಂದಣಿ ಸಂಖ್ಯೆಯು ಪ್ರಮುಖವಾಗಿ ಕಾಣುವಂತೆ ಇರಬೇಕು.
13. ಕ್ರಮ ಸಂಖ್ಯೆ (**VI**) ರ (7), (8), (9), (10), (11) ರಲ್ಲಿನ ಅಂಶಗಳನ್ನು ಸೇರಿಸಿಕೊಂಡು ರೂ. 100/- ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.
14. ಮಂಜೂರಾತಿಗಾಗಿ ಸಲ್ಲಿಸುವ ದಾಖಲಾತಿಗಳ ನಕಲು ಪ್ರತಿಗೆ ಕಡ್ಡಾಯವಾಗಿ ದಿನಾಂಕದೊಂದಿಗೆ RSK ಅಧಿಕಾರಿ / ತಾಲ್ಲೂಕು ಅಧಿಕಾರಿಗಳು ದೃಢೀಕರಿಸಬೇಕು ಇಲ್ಲದಿದ್ದಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುವುದು.

**VIII. ನಿರ್ದೇಶನಾಲಯದ ಅನುಮೋದನೆ:-**

ನಿರ್ದೇಶನಾಲಯದ ಅನುಮೋದನೆಗೆ ನಿಗಧಿತ ದಾಖಲಾತಿಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮಾತ್ರ ಪ್ರತಿಯೊಂದು ದಾಖಲಾತಿಗಳನ್ನು ಪರಿಶೀಲಿಸಿ ಚೆಕ್‌ಲಿಸ್ಟ್‌ನೊಂದಿಗೆ ಮಂಜೂರಾತಿಗೆ ಮಂಡಿಸುವುದು.

ಜಿಲ್ಲೆಗಳಿಂದ ಅರ್ಹತೆ ಹೊಂದಿಲ್ಲದ, ನಿಗಧಿಪಡಿಸಿದ ಸಮಯದ ನಂತರ ವಿಳಂಬವಾಗಿ ಅಥವಾ ಅಪೂರ್ಣವಾದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ತೋಟಗಾರಿಕೆ ಉಪ ನಿರ್ದೇಶಕರು ಮತ್ತು ಸಂಬಂಧಪಟ್ಟ ರಾಷ್ಟ್ರೀಯ ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ನಿರ್ದೇಶಕ ರವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

## IX. ಸಹಾಯಧನ ವಿತರಣೆ ಹಾಗೂ ಅನುಸರಿಸಬೇಕಾದ ಕ್ರಮಗಳು :

1. ಜಿಲ್ಲೆಯ ತೋಉನಿ(ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಟ್ರ್ಯಾಕ್ಟರ್ ಖರೀದಿಯ ವರದಿಯನ್ನು ಪರಿಶೀಲಿಸಿದ ನಂತರ, ಅರ್ಹ ಇದ್ದಲ್ಲಿ ಮಾತ್ರ ಸಹಾಯಧನ ಮೊತ್ತವನ್ನು ಬಿಡುಗಡೆ ಮಾಡುವುದು.
2. ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲೋಗೋ (LOGO) ದೊಂದಿಗೆ ಸಂಕ್ಷಿಪ್ತ ವಿವರವುಳ್ಳ **ನಾಮಫಲಕವನ್ನು** ಕಡ್ಡಾಯವಾಗಿ ಟ್ರ್ಯಾಕ್ಟರ್ ನ ಮೇಲೆ ಪ್ರದರ್ಶಿಸಬೇಕು.
3. ಫಲಾನಭವಿಯ ಸಹಾಯಧನವನ್ನು ನಿಯಮಾನುಸಾರ ಬ್ಯಾಂಕ್ ಉಳಿತಾಯ ಖಾತೆಗೆ ಅಥವಾ ಫಲಾನುಭವಿಯು ಟ್ರ್ಯಾಕ್ಟರ್ ಖರೀದಿಗೆ ಸಾಲ ಪಡೆದಿದ್ದಲ್ಲಿ, ತೆಗೆದುಕೊಂಡಿರುವ ಟ್ರ್ಯಾಕ್ಟರ್ ಸಾಲದ ಖಾತೆಗೆ / ಬ್ಯಾಂಕಿನ ಉಳಿತಾಯ ಖಾತೆಗೆ ಜಮಾ ಆಗುವಂತೆ ಸಂಬಂಧಪಟ್ಟ ಬ್ಯಾಂಕ್ ಶಾಖೆಗೆ NEFT / ECS ಮೂಲಕ ಬಿಡುಗಡೆ ಮಾಡುವುದು.

## X.ಆರ್ಥಿಕ ಪ್ರತ್ಯಾಯೋಜನೆ ( Delegation of Power) :

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಟ್ರ್ಯಾಕ್ಟರ್ ಕಾರ್ಯಕ್ರಮದಡಿ, ಸರ್ಕಾರದ ಮಾರ್ಗಸೂಚಿಯಂತೆ ಮಂಜೂರು ಮಾಡಲು ಮಿಷನ್ ನಿರ್ದೇಶಕರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

## XI. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).

1. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ **KSHMA** ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಸಲ್ಲಿಸುವುದು.
2. ಟ್ರ್ಯಾಕ್ಟರ್/ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ಸಹಾಯಧನ ಮಂಜೂರಾತಿಗಾಗಿ ಜನವರಿ - 2014 ರ ನಂತರ ಅರ್ಜಿಗಳು ನಿರ್ದೇಶನಾಲಯಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಪುರಸ್ಕರಿಸದೆ, ಸಂಬಂಧಿಸಿದ ಜಿಲ್ಲೆಗಳಿಗೆ ಹಿಂತಿರುಗಿಸಲಾಗುವುದು.
3. ಜಿಲ್ಲೆಗೆ ನಿಗದಿಪಡಿಸಿದ ಗುರಿಗಳು ಮೀರಿದ್ದಲ್ಲಿ, ಮಿಷನ್ ನಿರ್ದೇಶಕರ ಅನುಮತಿ ಪಡೆಯದೇ ಪ್ರಸ್ತಾವನೆಗಳನ್ನು ಮಂಜೂರಾತಿಗಾಗಿ ಸಲ್ಲಿಸುವಂತಿಲ್ಲ.